ದಿನಾಂಕಃ 30.03.2022 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಆರ್ ಕೆ ಎಂ ವಕೀಲರಿಂದ -

ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಅಪಘಾತದ ವಿಷಯವನ್ನು ನನಗೆ ಫೋನ್ ಮುಖಾಂತರ ತಿಳಿಸಿರುತ್ತಾರೆ. ನನ್ನ ಪತಿಯು ಆರ್ ಟಿ ಒ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದು ಚೆಕಿಂಗ್ ಕಾಲಕ್ಕೆ ಇದ್ದರು ಎಂದರೆ ಅವರು ಪ್ರಯಾಣಕ್ಕೆ ಸಾಹೇಬರ ಜೊತೆಗೆ ಹೋಗಿರುವುದು ನಿಜ. ಎನ್ ಹೆಚ್ 50 ರಸ್ತೆಯ ಮೇಲೆ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಘಟನೆಯಾದ ದಿನದಂದು ನನ್ನ ಪತಿಯು ರಸ್ತೆಯ



ಮೇಲೆ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ಕೆಎ 03 ಎಂ ಡಿ 8158 ಕಾರಿನಿಂದ ಅಪಘಾತವಾಗಿದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಪ್ರತ್ಯಕ್ಷದರ್ಶಿಗಳು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ಅಪಘಾತವಾದ ಸಮಯದಲ್ಲಿ ನಾನು ಮನೆಯಲ್ಲಿದ್ದೆನು. ಅಪಘಾತವಾದ ವಿಷಯವನ್ನು ಫೋನ್ ಮುಖಾಂತರ ತಿಳಿಸಿರುತ್ತಾರೆ. ಕಾರಿನ ನಂಬರ್ ನನಗೆ ಫೋನ್ ನಲ್ಲಿ ತಿಳಿಸಿಲ್ಲ.

ದೂರನ್ನು ಪ್ರಮತೇಶ್ ಕೊಟ್ಟಿರುತ್ತಾರೆ. ನನ್ನ ಪತಿಯು ಆರ್ ಟಿ ಓ ಇಲಾಖೆಯಲ್ಲಿ ಜೀಪ್ ಚಾಲಕರೆಂದು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅಪಘಾತವಾದ ಕಾರಿಗೆ 2 ನೇ ಎದುರುದಾರರು ಮಾಲೀಕರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಾರಿನ ವಿಮೆ 2 ನೇ ಎದುರುದಾರರ ಬಳಿ ಇರುತ್ತದೆ ಎಂದರೆ ಸರಿ. 2 ನೇ ಎದುರುದಾರನು ಕಾರನ್ನು ವಿಮೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಎದುರುದಾರನು ಕೆಎ 03 ಎಂ ಡಿ 8158 ಕೇವಲ ಕಾರಿನ ಚಾಲಕನಿರುತ್ತಾನೆ ಎಂದರೆ ಸರಿ. ಅಪಘಾತವಾದ ದಿನದಂದು ಸಾಕಷ್ಟು ವಾಹನಗಳು ಚಲಾಯಿಸುತ್ತಿದ್ದು ಬೇರೆ ಯಾವುದೋ ವಾಹದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವಾಗಿದೆ ಎಂದು ತಿಳಿದುಕೊಂಡು ಸಹಾಯ ಮಾಡಲು 1 ನೇ ಎದುರುದಾರನು ಹೋದಾಗ 1 ನೇ ಎದುರುದಾರನ ಮೇಲೆ ಸುಳ್ಳು ದೂರನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. 2 ನೇ ಎದರುದಾರನು ಪರಿಹಾರವನ್ನು ಕೊಡಲು ಬಾಧ್ಯಸ್ಥನಿರುತ್ತಾನೆ ಎಂದರೆ ನನಗೆ ಹೇಳಲು ಬರುವುದಿಲ್ಲ. ಕಾರಿನ ಮೇಲೆ ಸುಳ್ಳು ದೂರನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಪಿ-11 ರಿಂದ 13 ಸುಳ್ಳು ಮಜಪೂರಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. 1 ನೇ ಎದುರುದಾರ ಮತ್ತು ಅಪಘಾತಕ್ಕೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಈ ದಿನ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸಾ.ಸ.ಇದೆ.

ಪ್ರಧಾನ ಹಿರಿಯ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ ಜೆ ಎಂ, ದಾವಣಗೆರೆ.